## ಜೊತೆ ಜೊತೆಯಲಿ ಪ್ರೀತಿ

ಝಿ ಕನ್ನಡದಲ್ಲಿ ನೂತನವಾಗಿ 'ಜೊತೆ ಜೊತೆ'ಯಲ್ಲಿ ಪ್ರಾರಂಭವಾಗಿದೆ. ಶ್ರೀಮಂತ ಉದ್ಯಮಿ, ಬಡ ನಾಯಕಿ ಜೊತೆಯಾಗುವುದೇ ಕಥೆ. ಆರೂರ್ ಜಗದೀಶ್ ನಿರ್ದೇಶನ ಮಾಡಿದ್ದಾರೆ. ಈ ಧಾರಾವಾಹಿಯಲ್ಲಿ 45ರ ಉದ್ಯಮಿ ಆರ್ಯವರ್ಧನ್ ಇಪ್ಪತ್ತರ ಯುವತಿ ಅನು ಪ್ರೇಮಿಸಿದ್ದಾರೆ. ಒನ್ ಮಿನಿಟ್ ಅಪೂರ್ವ– ಶಿವಾಜಿರಾವ್ ಜಾದವ್ ಮಧ್ಯಮ ವರ್ಗದ ದಂಪತಿ ಅಭಿನಯ ಚೆನ್ನಾಗಿದೆ. ಅನಿರುದ್ಧ ಉದ್ಯಮಿ ಪಾತ್ರಕ್ಕೆ ಹೇಳಿ ಮಾಡಿಸಿದಂತಿದ್ದಾರೆ. ಜಾಹೀರಾತಿಗೆ ಒಂದು ನಿಮಿಷ ತೆಗೆದುಕೊಂಡಿರುವುದು ವಿಶೇಷ.

—ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

## ಮಾತಿಗಿಂತ ಉಗುಳು ಹೆಚ್ಚೇ?

ಮನರಂಜನೆಯೊಂದಿಗೆ ಜ್ಞಾನದೀವಿಗೆಯಾಗಿರುವ 'ಕನ್ನಡಿಗರ ಕೋಟ್ಯಧಿಪತಿ' ಕಾರ್ಯಕ್ರಮದಲ್ಲಿ ಸ್ಪರ್ಧಿಗಳ ಮಾತೇ ಹೆಚ್ಚು ಎನ್ನುವ ಅನುಭವ ಆಗುತ್ತಿದೆ. ಕೆಲವು ಸ್ಪರ್ಧಿಗಳು ಅತಿಯಾಗಿ ಮಾತನಾಡಿ ವೀಕ್ಷಕರಿಗೆ ಬೋರ್ ಹೊಡೆಸುತ್ತಾರೆ. ಸಂಕ್ಷಿಪ್ತವಾದ ಪರಿಚಯ, ಸಾಧನೆಗಳು, ಉದ್ದೇಶ ಮತ್ತು ಗುರಿ ಕಾರ್ಯಕ್ರಮಕ್ಕೆ ಮೆರುಗು ಕೊಡುತ್ತದೆ. ಅತಿಯಾಗಿ ಹೇಳಿಕೊಂಡು, ಕೊನೆಗೆ ಎರಡನೇ ಪ್ರಶ್ನೆಗೆ ಸಹಾಯವಾಣಿ ಮತ್ತು ನಾಲ್ಕನೇ ಪ್ರಶ್ನೆಗೆ ಗೇಟ್ ಪಾಸ್ ಆದರೆ ಮುಜುಗರವಾಗುತ್ತದೆ. ಪ್ರಶ್ನೆಗಳು ಮತ್ತು ಅದಕ್ಕೆ ನೀಡುವ ಉತ್ತರಕ್ಕೆ ಹೆಚ್ಚಿನ ಸಮಯವಿರಲಿ. ಉಳಿದ ಪ್ರಹಸನಗಳು ಚುಟುಕಾಗಿರಲಿ.

—ರಮಾನಂದ ಶರ್ಮಾ, ಬೆಂಗಳೂರು

ಶ್ಲಾಘನೀಯ: ನವರಸನಟ ಜಗ್ಗೇಶ್‌ರವರು ಬಹಳ ಚೆನ್ನಾಗಿ ಕಾರ್ಯಕ್ರಮವನ್ನು ನಡೆಸಿ ಕೊಟ್ಟರು. ತಮ್ಮ ಹಳೆಯ ಅನುಭವಗಳು ಮತ್ತು ಮಾತಿನ ವೈಖರಿಯಿಂದ ಮನರಂಜಿಸಿದರು. ನಟ ಪುನೀತ್ ರಾಜ್‌ಕುಮಾರ್ ಬಗ್ಗೆ ಮಾತಾಡುವಂತೆಯೇ ಇಲ್ಲ. ಅವರು ಸ್ಪರ್ಧಿಗಳನ್ನು ನಡೆಸಿಕೊಳ್ಳುವ ರೀತಿ ತುಂಬಾ ಶ್ಲಾಘನೀಯ.

—ಮಾಲತಿ ಪುರುಷೋತ್ತಮ, ಬೆಂಗಳೂರು

ವಾರದ ಪತ್ರ

## ಬೆಂಗಳೂರು ಮಾರಿದವರು ಯಾರು?

ಕಲರ್ಸ್ ಕನ್ನಡದ 'ಕನ್ನಡ ಕೋಟ್ಯಧಿಪತಿ'ಯಲ್ಲಿ ಸಂಸದರಾದ ಪ್ರತಾಪ ಸಿಂಹ ಮತ್ತು ತೇಜಸ್ವಿ ಸೂರ್ಯ ಭಾಗವಹಿಸಿದ್ದರು. ಬೆಂಗಳೂರನ್ನು 3 ಲಕ್ಷಕ್ಕೆ ಮಾರಿದವರು ಯಾರು ಎಂಬ ಪ್ರಶ್ನೆಗೆ ಅವರಿಬ್ಬರೂ ಉತ್ತರಿಸಬೇಕಿತ್ತು. ಉತ್ತರ ಅವರಿಗೆ ಸಭಿಕರ ತೀರ್ಮಾನಕ್ಕೆ ಬಿಟ್ಟರು. ಉತ್ತರವೇನೂ ಸರಿಯಿತ್ತು. ವಸ್ತುನಿಷ್ಠೆಯ ವಿವರಣೆಯತ್ತ ಅವರ ಗಮನ ಹರಿಸಿದ್ದರೆ ಚರಿತ್ರೆ ಜನರಿಗೆ ತಿಳಿಯುತ್ತಿತ್ತೇನೋ!

ಎರಡನೇ ಕೆಂಪೇಗೌಡ (ಇಮ್ಮಡಿ ಕೆಂಪೇಗೌಡ)ನನ್ನು ಸೋಲಿಸಲು ಹೈದರಾಬಾದ್ ನಿಜಾಮ ರಣದುಲ್ಲಾ ಖಾನ್ ಎಂಬ ದಳವಾಯಿಯನ್ನು ಸೈನ್ಯ ಸಮೇತ ಬೆಂಗಳೂರಿಗೆ ಕಳಿಸುತ್ತಾನೆ. ಈ ದಳವಾಯಿಗೆ ಸಹಕರಿಸಲು ಮತ್ತೊಬ್ಬ ಮರಾಠ ಸೈನ್ಯಾಧಿಕಾರಿ ಷಹಜಿ ಜತೆಗೂಡುತ್ತಾನೆ. ಬೆಂಗಳೂರು ನಿಜಾಮನ ಕೈವಶವಾದ ಮೇಲೆ ನಿಜಾಮ ಬೆಂಗಳೂರನ್ನು ಷಹಜಿಗೆ ಬಳುವಳಿಯಾಗಿ ನೀಡುತ್ತಾನೆ. ಆನಂತರ ಕಾಲದಲ್ಲಿ ಷಹಜಿಯ ಮಕ್ಕಳಲ್ಲಿ ಒಬ್ಬನಾದ ವೆಂಗಾಜಿ ಬೆಂಗಳೂರನ್ನು ಮಾರಲು ಯತ್ನಿಸಿದಾಗ ಶಿವಾಜಿ ದಂಡೆತ್ತಿ ಬಂದು ಅದನ್ನು ತಡೆಯುತ್ತಾನೆ. ಶಿವಾಜಿಯನ್ನು ಸೋಲಿಸಲು ದೆಹಲಿ ಸುಲ್ತಾನ (ಔರಂಗಜೇಬ) ಖಾಸಿಂಖಾನ್ ಎಂಬ ದಳವಾಯಿಯನ್ನು ಬೆಂಗಳೂರಿಗೆ ಮುತ್ತಿಗೆ ಹಾಕಲು ಆದೇಶಿಸುತ್ತಾನೆ. ಬೆಂಗಳೂರು ಖಾಸಿಂಖಾನ್ ವಶವಾಗುತ್ತದೆ. ಖಾಸಿಂಖಾನ್ ಬೆಂಗಳೂರಿನಲ್ಲಿ ತಂಗದೆ ಶಿರಾ (ಶೀರ್ರ)ಗೆ ಹೊರಡುವ ಮುಂಚೆ ಚಿಕ್ಕದೇವರಾಜ ಒಡೆಯರಿಗೆ 3 ಲಕ್ಷ ಚಿನ್ನದ ವರಾಹಕ್ಕೆ ಬೆಂಗಳೂರನ್ನು ಮಾರುತ್ತಾನೆ. ಹಾಗೆ ಮಾರಿದರೂ ನಗರವನ್ನು ಮೈಸೂರು ಒಡೆಯರಿಗೆ ಹಸ್ತಾಂತರಿಸಲು ಸತಾಯಿಸಿ ಮೂರು ತಿಂಗಳ ನಂತರ ಬಿಟ್ಟು ಕೊಡುತ್ತಾನೆ.

—ಟಿ.ಎಂ. ಶಿವಶಂಕರ್, ಬೆಂಗಳೂರು

## ಸುಂದರ ಆಪ್ತ ಸಮಾಲೋಚನೆ

ಚಂದನದ 'ಶುಭೋದಯ'ದ ಮೂಲಕ ನಾನಾ ಕ್ಷೇತ್ರಗಳ ಸಾಧಕರನ್ನು ಪರಿಚಯಿಸುವ ಕೆಲಸ ಶ್ಲಾಘನೀಯ. ಪ್ರತಿಯೊಬ್ಬರಿಗೂ ಹಸಿವಿನ ದಾಹಕ್ಕಿಂತ ಅರಿವಿನ ದಾಹ, ಜ್ಞಾನ ದಾಹವಿದ್ದರೆ ಮಾತ್ರ ತಮ್ಮ ಗುರಿ ತಲುಪಲು ಸಾಧ್ಯ ಎಂಬ ಅನುಭವದ ನುಡಿಯನ್ನು ಬಹುತೇಕರು ಹೇಳಿದ್ದಾರೆ. ಕಾರ್ಯಕ್ರಮದುದ್ದಕ್ಕೂ ಸಂದರ್ಶನವೆನಿಸದೆ, ಆಪ್ತ ಸಮಾಲೋಚನೆ ನಡೆಸಿದ ಅನುಭವ ನೀಡುತ್ತದೆ.

—ಸಿಹಿಮೊಗೆ ರಮೇಶ್, ಮೈಸೂರು

## ಪರಿಣಾಮ ಪ್ರಜ್ಞೆಯೂ ಬೇಕು

ಝೀ ಟೀವಿಯ 'ಕಮಲಿ' ಮತ್ತು 'ಯಾರೇ ನೀ ಮೋಹಿನಿ' ಧಾರಾವಾಹಿ ಎರಡರ ಕತೆಯೂ ಒಂದೇ ರೀತಿ ಇದೆ. ಓರ್ವ ಹುಡುಗ ಕಿತ್ತಾಡುವುದು ಅದೂ ಆಸ್ತಿಗಾಗಿ. ಇದ್ದಬದ್ದ ಹಿಂಸೆ ಕೊಡುವುದು, ಸುಪಾರಿ ಕೊಡುವುದು, ಮಂತ್ರವಾದಿ ಕರೆಸುವುದು, ಊಟದಲ್ಲಿ, ಹಾಲಿನಲ್ಲಿ ವಿಷ ಹಾಕುವುದು ಇತ್ಯಾದಿ.

ಇಂತಹ ಧಾರಾವಾಹಿ ವೀಕ್ಷಕರಲ್ಲಿ ಎಂತಹ ಪರಿಣಾಮ ಬೀರಬಹುದು ಎನ್ನುವುದನ್ನು ಗಮನಿಸಬೇಕು. ಆಗಾಗ ಮದ್ಯಪಾನ, ಧೂಮಪಾನ ಸನ್ನಿವೇಶ ತರುವುದು ಅಗತ್ಯ ಇದೆಯೇ?

—ಅಂಚೆ ಸುಬ್ರಹ್ಮಣ್ಯ, ಕೊಪ್ಪ

## ಇದು ಸೀತಾರಾಮ್ ಹಿರಿಮೆ

ಧಾರಾವಾಹಿಗಳನ್ನು ತಯಾರಿಸುವವರು ಹಬ್ಬಗಳು ಬರುವುದನ್ನೇ ಕಾಯುತ್ತಿರುತ್ತಾರೆ. ಯಾಕೆಂದರೆ ಒಂದು ಹಬ್ಬ ಬಂದಿತೆಂದರೆ ಅದರ ಸಿದ್ಧತೆ, ಆಚರಣೆ ಹಾಗೂ ಮುಕ್ತಾಯಗಳನ್ನು ತೋರಿಸುತ್ತ ಚರ್ವಿತ ಚರ್ವಣ ಸಂಭಾಷಣೆಗಳಲ್ಲಿ ಕಾಲಯಾಪನೆ ಮಾಡುತ್ತಾ ಸುಖವಾಗಿ ಒಂದು ವಾರವನ್ನು ಕಳೆಯಬಹುದು. ಎಳೆಯುವ ಗುರಿಸಾಧನೆಗೆ ಒಳ್ಳೆಯ ಸಂದರ್ಭ. ಮೊನ್ನೆ ಮೊನ್ನೆ ಬಂದಿದ್ದ ಚೌತಿಯನ್ನು ಅನೇಕರು ಹೀಗೆ `ಸದುಪಯೋಗ'ಪಡಿಸಿಕೊಂಡಿದ್ದರೂ, 'ಮಗಳು ಜಾನಕಿ'ಯ ಕಥೆ ಮಾತ್ರ ಎಂದಿನಂತೆ ಸಾಗಿಬಂತು. ಹೇಗಾದರೂ ಜಗ್ಗಬೇಕೆಂದು ಅನೇಕ ಗಿಮಿಕ್‌ಗಳನ್ನು ಮಾಡುವ ಮಾಮೂಲಿ ಜಾಡನ್ನು ಹಿಡಿಯದೇ ಗಂಭೀರವಾಗಿ ಕಥೆಯನ್ನು ಮುನ್ನಡೆಸುವುದರಿಂದಲೇ ಟಿ.ಎನ್. ಸೀತಾರಾಮ್ ಭಿನ್ನವಾಗಿ ನಿಲ್ಲುತ್ತಾರೆ. ಗ್ರೇಟ್ ಎನಿಸುತ್ತಾರೆ.

—ಜಿ.ಮೃತ್ಯುಂಜಯ , ಬೆಂಗಳೂರು

## ಆದರೂ ಮನ ಗೆದ್ದಿದೆ

ಕಲರ್ಸ್‌ನ 'ಮಗಳು ಜಾನಕಿ' ಆಮೆ ವೇಗದಲ್ಲಿ ಪ್ರಸಾರವಾಗುತ್ತಿದ್ದರೂ ವೀಕ್ಷಕರ ಮೆಚ್ಚುಗೆ ಪಡೆದಿದೆ. ಬಹುತೇಕ ನಟರ ಕಲಾ ಕೌಶಲ್ಯ ನೋಡುಗರನ್ನು ಹಿಡಿದಿಟ್ಟುಕೊಂಡಿದೆ. ಅದರಲ್ಲಿನ ಸಂಗೀತ... ಆಲಾಪನೆ... ಎಲ್ಲದೂ ಮನಮೋಹಕ.

—ರಘುನಾಥರಾವ್ ತಾಪ್ಸೆ ದಾವಣಗೆರೆ

## ಮರೆಸುವುದು ಬೇಡ

ಕಲರ್ಸ್‌ನ 'ಕನ್ನಡ ಕೋಗಿಲೆ'ಯಲ್ಲಿ ಈಗಷ್ಟೇ ಪ್ರವರ್ಧಮಾನಕ್ಕೆ ಬರುತ್ತಿರುವ 'ಇಟಗಿ' ಎಂಬ ಬಾಲಕನಿಗೆ ಹೆಚ್ಚು ಮನ್ನಣೆ ನೀಡಲಾಗಿದೆ. ಕಳೆದ ಸೀಜನ್‌ನಲ್ಲಿ ಅವನಿಗೆ ಮೂರನೇ ಸ್ಥಾನ ಕೊಟ್ಟದ್ದು ನನಗೆ ಇಷ್ಟ ಆಗಲಿಲ್ಲ. ಆತ ಪ್ರಪಂಚವನ್ನು ಅರ್ಥ ಮಾಡಿಕೊಳ್ಳುವ ಮಟ್ಟಕ್ಕೆ ಬರಲಿ. ಅವನ ಸಂಗೀತ ಸಹ ಒಂದು ಮಟ್ಟಕ್ಕೆ ಬೆಳೆದಿರುತ್ತದೆ. ಆಗ ಅವನ ಸಾಮರ್ಥ್ಯಕ್ಕೆ ತಕ್ಕ ಪ್ರತಿಫಲ ಸಿಗಲಿ. ಕಾರ್ಯಕ್ರಮಕ್ಕೆ ಸಂಬಂಧಪಟ್ಟವರು ಹೇಳಿಕೊಟ್ಟಂತೆ ಹೇಳುತ್ತಾನೆ ಎಂದು ಅನ್ನಿಸುತ್ತದೆ. ಹೊಗಳಿ ಹೊಗಳಿ ಅವನು ತನ್ನತನವನ್ನು ಮರೆಯದೆ ತನ್ನ ತನದಲ್ಲಿ ಮೆರೆಯಲಿ ಎನ್ನುವುದು ನನ್ನ ಆಶಯ.

—ಎನ್.ಎಸ್. ಚಂದ್ರಶೇಖರ್ ಬೆಂಗಳೂರು